## <u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

ಓ.ಎಸ್ ಸಂಖ್ಯೆ.**2918/2022** ಪಿ.ಡಬ್ಲೂ .1

ದಿನಾಂಕಃ 07-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದೂವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-

ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 4-9 ಗುಂಟೆ ಎಂದರೆ ಸರಿ. ಸದರಿ ಆಸ್ತಿ ಮೂಲತಃ ಮುನಿಭೈರಪ್ಪನವರ ಹೆಸರಿನಲ್ಲಿತ್ತು ಎಂದರೆ ಸರಿ. ಮುನಿಭೈರಪ್ಪನ 4 ಜನ ಮಕ್ಕಳು ದಿನಾಂಕಃ 15-01-1928 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ನೊಂದಣಿ ವಿಭಾಗ ಪತ್ರದಲ್ಲಿ ದಾವಾ ಆಸ್ತಿಯ ಬಗ್ಗೆ ಮುನಿಭೈರಪ್ಪನವರ ಮಕ್ಕಳಾದ ಭೇರಪ್ಪ, ಕೆಂಪಣ್ಣ ಮತ್ತು ಉತ್ತನಲ್ಲಪ್ಪ ಹೆಸರುಗಳ ಬಗ್ಗೆ ಉಲ್ಲೇಖ ಇದೆ ಎಂದರೆ ಸಾಕ್ಷಿ ಕೆಂಪಣ್ಣನವರ ಹೆಸರು ಇಲ್ಲ ಎಂದು ನುಡಿಯುತ್ತಾರೆ. ಭೇರಪ್ಪನವರಿಗೆ ಸರ್ವೆ ನಂ. 72 ರಲ್ಲಿ ಭಾಗ ಹೋಗಿರುವ ಬಗ್ಗೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ವಿಭಾಗ ಪತ್ರ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಎಲ್ಲೂ ಸಹ ಭೇರಪ್ಪನವರಿಗೆ ಸರ್ವೆ ನಂ. 72 ರಲ್ಲಿ 2-9 ಗುಂಟೆ ಭಾಗವಾಗಿ ಹೋಗಿರುವ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನ್ನು ಹೊರತುಪಡಿಸಿ ಭೇರಪ್ಪನವರ ಹೆಸರಿನಲ್ಲಿರುವ ಬೇರೆ ದಾಖಲೆಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಭೇರಪ್ಪನವರಿಗೆ ದೊಡ್ಡನಂಜಮ್ಮ @ ನಂಜಮ್ಮ ಒಬ್ಬರೆ ಮಗಳು ಎಂದರೆ ಸರಿ. ಅವರನ್ನು ಯನಗುಂಟೆ ಗ್ರಾಮದ ಭೈರಪ್ಪನವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅವರನ್ನು ಮನೆ ಅಳಿಯನನ್ನಾಗಿ ಇಟ್ಟುಕೊಂಡಿರುತ್ತಾರೆ. ಸದರಿ ಭೈರಪ್ಪನವರು ಯನಗುಂಟೆ ಗ್ರಾಮದವರು ಎಂದರೆ ಗೊತ್ತಿಲ್ಲ. ಸದರಿ ಭೈರಪ್ಪನವರು ಯಾವ ಗ್ರಾಮದವರು ಎಂದು ನಾನು ತಿಳಿದುಕೊಂಡಿಲ್ಲ. ಭೈರಪ್ಪನವರ ತಂದೆಯ ಹೆಸರು ಮುನಿಶ್ಯಾಮಪ್ಪ ಎಂದರೆ ಸುಳ್ಳು. ಸದರಿ ಮುನಿಶ್ಯಾಮಪ್ಪನವರಿಗೆ ಬುಡ್ಡಣ್ಣ @ ಬುಡ್ಡಪ್ಪ ಮತ್ತು ಭೈರಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸುಳ್ಳು. ಬುಡ್ಡಣ್ಣ @ ಬುಡ್ಡಪ್ಪನವರಿಗೆ ದೊಡ್ಡಮುನಿಶ್ಯಾಮಪ್ಪ ಮತ್ತು ಚಿಕ್ಕ ಮುನಿಶ್ಯಾಮಪ್ಪ @ ಬಿ. ಮುನಿಶ್ಯಾಮಪ್ಪ ಇಬ್ಬರು ಮಕ್ಕಳು ಎಂದರೆ ಸುಳ್ಳು. ದೊಡ್ಡಮುನಿಶ್ಯಾಮಪ್ಪ ಮತ್ತು ಚಿಕ್ಕ ಮುನಿಶ್ಯಾಮಪ್ಪ

@ ಬಿ. ಮುನಿಶ್ಯಾಮಪ್ಪ ನವರಿಗೆ ಎಷ್ಟು ಜನ ಮಕ್ಕಳು ಎಂದರೆ ಗೊತ್ತಿಲ್ಲ. ಬಿ. ಮುನಿಶ್ಯಾಮಪ್ಪ ನವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಅವರು ನನ್ನ ತಂದೆಯಾಗಿದ್ದು, ಅವರನ್ನು ಚಿಕ್ಕ ಮುನಿಶ್ಯಾಮಪ್ಪ ಎಂದು ಕರೆಯುವುದಿಲ್ಲ. ನನ್ನ ತಂದೆಯ ತಂದೆ ಹೆಸರು ಭೈರಪ್ಪ ಎಂದು ತೋರಿಸಲು ದಾಖಲೆ ಇದೆ. ಹಾಜರು ಮಾಡಲು ತೊಂದರೆ ಇಲ್ಲ. ಅವಶ್ಯಕತೆ ಇದ್ದಲ್ಲಿ ಹಾಜರು ಮಾಡುತ್ತೇನೆ. ನನ್ನ ತಂದೆಯ ಹೆಸರು ಬುಡ್ಡಣ್ಣ @ ಬುಡ್ಡಪ್ಪ ಆಗಿದ್ದು, ಆ ಬಗ್ಗೆ ದಾಖಲೆ ಹಾಜರು ಮಾಡಿದ್ದಲ್ಲಿ ಗೊತ್ತಾಗುತ್ತದೆ ಎಂದು ಹಾಜರು ಮಾಡಿಲ್ಲ ಎಂದರೆ ಸುಳ್ಳು. ನಮಗೂ ಮತ್ತು ದೊಡ್ಡನಂಜಮ್ಮನವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು. ಅವರು ನನಗೆ ಅಜ್ಜಿಯಾಗಬೇಕು. ಆ ಬಗ್ಗೆ ದಾಖಲೆ ಇದೆ. ದೊಡ್ಡನಂಜಮ್ಮನವರಿಗೆ ಮಕ್ಕಳು ಇಲ್ಲದೆ ಇರುವ ಕಾರಣ ಅವರ ಜೀವಂತ ಇರುವವರೆಗೂ ಕೆಂಪಣ್ಣ ಮತ್ತು ಉತ್ತನಲ್ಲಪ್ಪನ ವಾರಸುದಾರರು ನೋಡಿಕೊಂಡಿದ್ದರು ಎಂದರೆ ಸುಳ್ಳು. ಹಾಗಾಗಿ ದೊಡ್ಡನಂಜಮ್ಮನವರ ವಾರಸುದಾರರಾದ ಕೆಂಪಣ್ಣ ಮತ್ತು ಉತ್ತನಲ್ಲಪ್ಪನವರ ವಾರಸುದಾರರಿಗೆ ದಾವಾ ಆಸ್ತಿ ಸೇರಬೇಕು ಎಂದರೆ ಸುಳ್ಳು. ದಾವಾ ಆಸ್ತಿ ಸರ್ವೆ ನಂ. 72 ದೊಡ್ಡನಂಜಮ್ಮನವರ ಹೆಸರಿನಲ್ಲಿ ಯಾವುದೇ ದಾಖಲೆ ಇಲ್ಲ ಎಂದರೆ ಸುಳ್ಳು. ಹಳೆ ಕೈ-ಬರಹದ ಪಹಣಿ ಇದೆ. ಸದರಿ ಪಹಣಿಗಳಲ್ಲಿ ದೊಡ್ಡನಂಜಮ್ಮನವರ ಹೆಸರಿನಲ್ಲಿ 2-9 ಗುಂಟೆ ಜಮೀನು ಇದೆ. ನಾನು ಹಾಜರು ಮಾಡಿರುವ ನಿಡಿ. 2 ರಲ್ಲಿ ದೊಡ್ಡನಂಜಮ್ಮನವರ ಹೆಸರು ಇಲ್ಲ ಎಂದರೆ ಸಾಕ್ಷಿ ಕಾಲಂ ನಂ.12 ರಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ಕಾಲಂ ನಂ.12 ರಲ್ಲಿ ದೊಡ್ಡನಂಜಮ್ಮನವರ ಹೆಸರನ್ನು ನಾವು ಸೃಷ್ಟಿ ಮಾಡಿ ಸೇರಿಸಿರುತ್ತೇವೆ ಎಂದರೆ ಸುಳ್ಳು. 2-9 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಎಲ್ಲಿಯೂ ಕೂಡ ಪಹಣಿಯಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ದೊಡ್ಡನಂಜಮ್ಮನವರ ಹೆಸರಿನಲ್ಲಿ 2-9 ಗುಂಟೆ ಜಮೀನು ಯಾವ ದಾಖಲೆಗಳಲ್ಲಿಯೂ ಸಹ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ. 2 ರ 1994-95 ರ ಸಾಲಿನ ಪಹಣಿಯಲ್ಲಿ MR No.3/1995-96 ರಂತೆ ವೆಂಕಟೇಶಪ್ಪನವರ ಹೆಸರಿನಲ್ಲಿ 9 ಗುಂಟ ಜಮೀನು ನಮೂದಾಗಿದೆ ಎಂದರೆ

ಸಾಕ್ಷಿ ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ MR No.3/1995-96 ರ ದಾಖಲೆಯನ್ನು ಪ್ರಶ್ನೇ ಮಾಡಿರುತ್ತೇನೆ.

ಮುಂದೂವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(**ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.